# ದುಬಾರಿ ಟೀ ಕೆಟಲ್!

ಇದು ಚಹಾ ತುಂಬುವ ಕೆಟಲ್ ಅಥವಾ ಕುಡಿಕೆ. ನೋಡಲು ಮನ ಮೋಹಕವಾಗಿದೆ, ನಮ್ಮ ಮನೆಯಲ್ಲಿಯೂ ಒಂದು ಇರಲಿ ಎಂದು ಭಾವಿಸಿದರೆ ಅದೇನೂ ಮಾರುಕಟ್ಟೆಯಲ್ಲಿ ಸಿಗುವುದಿಲ್ಲ. ಅದರ ತಯಾರಿಕೆಗೆ ಬಳಸಿದ ವಸ್ತುಗಳ ಬೆಲೆ ಮೂವತ್ತು ಲಕ್ಷ ಡಾಲರ್ ಎಂದರೆ ಬೆಚ್ಚಿ ಬೀಳುವ ಸರದಿ ನಮ್ಮದು. ದುಬಾರಿ ಬೆಲೆಯ ಟೀ ಕೆಟಲ್ ಈಗ ಗಿನ್ನಿಸ್ ದಾಖಲೆ ನಿರ್ಮಿಸಿದೆ.

ಸುಂದರವಾದ ಈ ಕಲಾತ್ಮಕ ಚಹಾ ಕುಡಿಕೆಗೆ ಇಷ್ಟೊಂದು ಬೆಲೆಯಾದರೂ ಯಾಕೆ? ಅದನ್ನು ತಯಾರಿಸಲು ಬಳಸಿದ ವಸ್ತುಗಳಾದರೂ ಏನೇನಿದೆ ನೋಡಿ. ಬೆಳ್ಳಿ ಮತ್ತು 18 ಕ್ಯಾರಟ್ ಚಿನ್ನವನ್ನು ಉಪಯೋಗಿಸಿ ಅದು ಸಿದ್ಧವಾಗಿದೆ. ಇದರಲ್ಲಿ ಬಣ್ಣ ಬಣ್ಣದ 1658 ವಜ್ರದ ತುಣುಕುಗಳನ್ನು ಅಳವಡಿಸಲಾಗಿದೆ. ಅದರ ಫಳಫಳ ಬೆಳಕು ಕಂಡು `ಇದು ಆಗ್ನೇಯ ಏಷ್ಯಾದ ಹೊಳೆಯುವ ಸೂರ್ಯ' ಎಂದು ಎಲ್ಲರೂ ಹೊಗಳಿದ್ದಾರೆ. ಕುಡಿಕೆಯಲ್ಲಿ 386 ಮಾಣಿಕ್ಯಗಳಿವೆ. ಮನಮೋಹಕ ಕೆಂಪು ಹರಳು ಶಿರೋಭಾಗದಲ್ಲಿ ಎದ್ದು ಕಾಣುತ್ತಿದೆ. ಮಧ್ಯ ಭಾಗದಲ್ಲಿಯೂ ಅತಿ ಅಮೂಲ್ಯವಾದ ಥಾಯ್ ಕೆಂಪು ರತ್ನವನ್ನು ಕೂಡಿಸಲಾಗಿದೆ.

ಕುಶಲ ಕೆಲಸಗಾರರು ಈ ಕುಡಿಕೆಯನ್ನು ನಿರ್ಮಿಸಲು ಆರು ತಿಂಗಳು ಶ್ರಮಪಟ್ಟರು. ಅಂದ ಹಾಗೆ ಈ ಅಮೂಲ್ಯ ವಸ್ತುವಿನ ಸೃಷ್ಟಿಗೆ ಕಾರಣರಾದವರು ಭಾರತೀಯ ಮೂಲದವರೇ. ಲಂಡನ್ನಿನಲ್ಲಿರುವ ಮೋಸಿಮನ್ ರೆಸ್ಟೋರೆಂಟಿನ ನಿರ್ಮಲ್ ಸೇಥಿ ಹಾಗೂ ಅವರ ಪತ್ನಿ ಚಿತ್ರಾ ಸೇಥಿ. ಚಿತ್ತ ಸೆಳೆಯುವ ಚಹಾ ಕುಡಿಕೆಯ ಮೋಹಕ ಹಿಡಿಕೆ ಆನೆ ದಂತದಿಂದ ತಯಾರಾಗಿದೆ.

■ ಪ. ರಾಮಕೃಷ್ಣ ಶಾಸ್ತ್ರಿ



*ಚಿನ್ನ, ಬೆಳ್ಳಿ, ವಜ್ರ, ದುಬಾರಿ ಹರಳುಗಳಿಂದ ತಯಾರಿಸಿದ ಈ ಚಹಾ ಕೆಟಲ್‌ನಲ್ಲಿ 1658 ವರ್ಣರಂಜಿತ ವಜ್ರದ ಹರಳುಗಳಿವೆ..!*

